ದಿನಾಂಕ :13-08-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ಎಂ ಆರ್ 70/1998-99 ರಂತೆ ಸರ್ವೆ ನಂ. 29/3 ರ ಖಾತೆ ಮತ್ತು ಪಹಣಿ ಕೃಷ್ಣಮೂರ್ತಿ ರವರ ಹೆಸರನಲ್ಲಿದೆ ಎಂದರೆ ಸಾಕ್ಷಿಯು ಅವರು ಅದನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಉತ್ತರಿಸಿದ್ದಾರೆ . ಸದರಿ ಸ್ವತ್ತಿನಲ್ಲಿ ಕೃಷ್ಣಮೂರ್ತಿ ರವರು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಕೃಷ್ಣಮೂರ್ತಿ ರವರು ಮರಣ ಹೊಂದಿದ್ದಾರೆ ಎಂದರೆ ಸರಿ . ಅವರ ಮರಣಾ ನಂತರ ಸರ್ವೆ ನಂ. 29/3 ರ ಖಾತೆ ಮತ್ತು ಪಹಣಿ ಅವರ ಪತ್ನಿ 3 ನೇ ಪ್ರತಿವಾದಿಯ ಜಯಮ್ಮ ರವರ ಹೆಸರಿಗೆ ದಾಖಲಾಗಿದೆ ಎಂದರೆ ಸಾಕ್ಷಿಯು ದಾಖಲಾಗಿರುವುದು ನಿಜ ಅವರು ಅದನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಉತ್ತರಿಸಿದ್ದಾರೆ . ಕರಿಯಣ್ಣ ಬಿನ್ ಬಡಕಯ್ಯ ಎಂದರೆ ನಮ್ಮ ತಾತ . ಅವರು ದಿಃ 01-06-1959 ರಂದು 1 ಎಕರೆ 38 1/2 ಗುಂಟೆ ಸ್ವತ್ತನ್ನು ಮೊಹಮದ್ ಅಲಿಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರ ಗುಬ್ಬಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿದೆ ಎಂದರೆ ಸರಿಯಲ್ಲ. ಸದರಿ ಪತ್ರವು 788/1959-60 ಬುಕ್ ನಂ . 1 ವಾಲಿಮ್ ನಂ . 974 ಎಂಬುದಾಗಿ ನೋಂದಣಿಯಾಗಿದೆ ಎಂದರೆ ಸಾಕ್ಷಿಯು ಸುರಿಗೇನಹಳ್ಳಿ ಕಾವಲಿನಲ್ಲಿ ಅಂತಹ ಸ್ವತ್ತು ನೋಂದಣಿ ಆಗಿಲ್ಲ ಎಂದು ಹಿಂಬರಹ ನೀಡಿದ್ದಾರೆ ಎಂದು ತಿಳಿಸಿದ್ದಾರೆ . ಸದರಿ ದಾಖಲೆಯ ಆಧಾರದಲ್ಲಿ 1/1974-75 ರಂತೆ ಮೊಹಮದ್ ಅಲಿ ಯವರ ಹೆಸರಿಗೆ ಎಂ ಆರ್ ದಾಖಲಾಗಿದೆ ಎಂದರೆ ಸರಿಯಲ್ಲ. ಅವರ ಮರಣಾ ನಂತರ ಸದರಿ ಸ್ವತ್ತು ಅವರ ಮಕ್ಕಳಿಗೆ ಬಂದಿದ್ದು ಅವರು ಅದನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಕೃಷ್ಣಮೂರ್ತಿ ರವರಿಗೆ ಸ್ವತ್ತನ್ನು ಮಾರಾಟ ಮಾಡಿದ ನಂತರ ಮೊಹಮದ್ ಅಲಿಯವರ ಮಕ್ಕಳಿಗೆ 5 ಗುಂಟೆ ಸ್ವತ್ತು ಉಳಿದಿತ್ತು ಎಂದರೆ ಸರಿಯಲ್ಲ . ಸದರಿ 5 ಗುಂಟೆ ಸ್ವತ್ತು ಸದರಿ ಸರ್ವೆ ನಂಬರ್ ನ ದಕ್ಷಿಣ ದಿಕ್ಕಿನಲ್ಲಿರುವ ಸ್ವತ್ತು ಎಂದರೆ ಸರಿಯಲ್ಲ. ದಿಃ 29-01-1997 ರಂದು ಅವರು ಸರ್ವೆ ನಂ . 43 ರಲ್ಲಿ ಎರಡು ಮುಕ್ಕಾಲು ಗುಂಟೆ ಸ್ವತ್ತನ್ನು ಡಾಃ ಮಂಜುನಾಥ ಬಿನ್ ಕಾಳಿ ಪ್ರಸಾದ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 29/3 ರಲ್ಲಿ ಎರಡು ಕಾಲು ಗುಂಟೆ ಸ್ವತ್ತನ್ನು ಅವರು ಡಾಃ ಮಂಜುನಾಥ ಬಿನ್ ಕಾಳಿ ಪ್ರಸಾದ್ ರವರಿಗೆ

ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್. 43 ರ ಸ್ವತ್ತು ಸರ್ವೆ ನಂ. 29/3 ರ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡು ಸ್ವತ್ತುಗಳ ಚಕ್ಕುಬಂದಿ ಪೂರ್ವಕ್ಕೆಃರಾಮಣ್ಣರವರ ಸ್ವತ್ತು , ಪಶ್ಚಿಮಕ್ಕೆಃ 29/3 ಮತ್ತು 43 ರಲ್ಲಿ ರಾಮಚಂದ್ರರವರಿಗೆ ಸೇರಿದ ಸ್ವತ್ತು , ಉತ್ತರಕ್ಕೆ ಃ ಕೃಷ್ಣಮೂರ್ತಿ ರವರ ಸ್ವತ್ತು , ದಕ್ಷಿಣಕ್ಕೆ ಃ ಸರ್ಕಾರಿ ರಸ್ತೆ ಎಂದರೆ ಸರಿಯಲ್ಲ . ಸದರಿ ಎರಡು ಸ್ವತ್ತುಗಳ ಖಾತೆಗಳು ಡಾಃ ಮಂಜುನಾಥ ಬಿನ್ ಕಾಳಿ ಪ್ರಸಾದ್ ರವರ ಹೆಸರಿನಲ್ಲಿದ್ದವು , ಪ್ರಸ್ತುತ 2 ನೇ ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳ ದಕ್ಷಿಣ ದಿಕ್ಕಿಗೆ ನಾಲ್ಕು ಅಂಗಡಿ ಮಳಿಗೆಗಳನ್ನು ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಅಂಗಡಿ ಮಳಿಗೆಗಳ ಉತ್ತರ ದಿಕ್ಕಿಗೆ ವಾಸದ ಮನೆ ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಮಹಾಲಕ್ಷ್ಮೀ ಕ್ಲಿನಿಕ್ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ಲಿನಿಕ್ ಹಿಂಭಾಗದ 5 ಗುಂಟೆ ಸ್ವತ್ತಿನಲ್ಲಿ ವಾಸದ ಮನೆ ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಡಾಃಮಂಜುನಾಥ ಮತ್ತು ಅವರ ಕುಟುಂಬದವರು ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಛಾಯಾಚಿತ್ರವೊಂದನ್ನು ತೋರಿಸಿ ಅದರಲ್ಲಿ ಕಂಡುಬರುವ ನಾಲ್ಕು ಮಳಿಗೆಗಳು , ಸರ್ವೆನಂ . 29/3 ರ 5 ಗುಂಟೆ ಸ್ವತ್ತಿನಲ್ಲಿ ನಿರ್ಮಿಸಿರುವ ಮಳಿಗೆಗಳು ಎಂದರೆ ಸಾಕ್ಷಿಯು ಅನಧಿಕೃತವಾಗಿ ನಿರ್ಮಿಸಿದ್ದಾರೆ , ಸುರಿಗೇನಹಳ್ಳಿ ಕಾವಲಿನಲ್ಲಿ ಆ ರೀತಿ ಕಟ್ಟಡ ಇರುವುದಿಲ್ಲ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತಿನಲ್ಲಿಯೇ ಸದರಿ ಅಂಗಡಿಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಅಂಗಡಿಗಳ ಹಿಂಭಾಗದಲ್ಲಿ ಮಹಾಲಕ್ಷ್ಮೀ ಕ್ಲಿನಿಕ್ ಎಂಬ ಕ್ಲಿನಿಕ್ ಇರುತ್ತದೆ ಎಂದರೆ ಸರಿಯಲ್ಲ . ಸದರಿ ಕ್ಲಿನಿಕ್ ನ ಹಿಂಭಾಗದಲ್ಲಿ ವಾಸದ ಮನೆಯನ್ನು ಸಹಾ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಚರ್ಚೆಯ ಅನುಕೂಲತೆಗಾಗಿ ಸಾಕ್ಷಿಯು ಗುರುತಿಸಿದ ಅಂಗಡಿ ಮಳಿಗೆಗಳಿರುವ ಛಾಯಾ ಚಿತ್ರ ಗಳನ್ನು ಕಡತಕ್ಕೆ ತೆಗೆದುಕೊಳ್ಳಲಾಗಿದೆ . ಮೇಲೆ ಹೇಳಿದ ಮೂರು ಕಟ್ಟಡಗಳು ದಾವಾ ಸ್ವತ್ತಿನಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳು ಎಂದರೆ ಸರಿಯಲ್ಲ. ಸದರಿ ಮೂರು ಕಟ್ಟಡಗಳಿಗೂ ಸಹಾ ವಿದ್ಯುಚ್ಛಕ್ತಿ ಸಂಪರ್ಕ ಪಡೆಯಲಾಗಿದೆ ಎಂದರೆ ಸರಿಯಲ್ಲ. ಪಂಚಾಯಿತಿಗೆ ಕಂದಾಯವನ್ನು ಸಹಾ ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಸದರಿ ಕಟ್ಟಡಗಳು ಇರುವುದು ತಿಳಿದಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1959 ನೇ ಸಾಲಿನಲ್ಲಿಯೇ ನನ್ನ ತಾತ ಸರ್ವೆ ನಂ. 29 ರಲ್ಲಿ 1 ಎಕರೆ 38 1/2 ಗುಂಟೆ ಸ್ವತ್ತನ್ನು ಮಾರಾಟ ಮಾಡಿ ಸದರಿ ಸ್ವತ್ತಿನ ಮೇಲೆ ತಮ್ಮ ಹಕ್ಕನ್ನು ಕಳೆದುಕೊಂಡಿದ್ದಾರೆ

ಎಂದರೆ ಸಾಕ್ಷಿಯು ನಿಪಿ -36 ರ ಪ್ರಕಾರ ನಮಗೆ ಇನ್ನು ಹಕ್ಕು ಇರುತ್ತದೆ ಎಂದು ತಿಳಿಸಿದ್ದಾರೆ. ಪ್ರತಿವಾದಿಗಳು ಸಲ್ಲಿಸಿರುವ ಪ್ರತಿರಕ್ಷಣಾ ಪತ್ರದ ವಿವರಗಳನ್ನು ತಿಳಿದುಕೊಂಡಿದ್ದೇನೆ . ಪ್ರತಿರಕ್ಷಣಾ ಪತ್ರದಲ್ಲಿ ದಿಃ 01-06-1959 ರ ಕ್ರಯ ಪತ್ರದ ವಿವರಗಳನ್ನು ಸಹಾ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ -36 ರ ದಾಖಲೆಯನ್ನು ಈ ದಾವೆ ಸಲ್ಲಿಸುವ ಮೊದಲೇ ಪಡೆದಿದ್ದೇನೆ . ಪ್ರತಿರಕ್ಷಣಾ ಪತ್ರದಲ್ಲಿ ದಿಃ 01-06-1959 ರ ಕ್ರಯ ಪತ್ರದ ವಿವರಗಳನ್ನು ಬರೆಯಲಾಗಿರುವ ವಿಚಾರ ತಿಳಿದ ನಂತರ ಉಪನೋಂದಣಾಧಿಕಾರಿಗಳ ಕಚೇರಿಗೆ ಹೋಗಿ ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿಯು ವಿಚಾರಿಸಿದ್ದೇನೆ ಆ ರೀತಿ ಯಾವುದೇ ಕ್ರಯ ಆಗಿಲ್ಲ ಎಂದು ಅವರು ಹೇಳಿದರು ಎಂದು ಸಾಕ್ಷಿ ಹೇಳಿದ್ದಾರೆ . ಉಪನೋಂದಣಾಧಿಕಾರಿಗಳ ಕಚೇರಿಯಿಂದ ಪಡೆದಿರುವ ದಾಖಲಾತಿಗಳ ಆಧಾರದಲ್ಲಿಯೇ ಪ್ರತಿವಾದಿಗಳು ತಮ್ಮ ಪ್ರತಿರಕ್ಷಣಾ ಪತ್ರದಲ್ಲಿ ಎಲ್ಲಾ ವಿವರಗಳನ್ನು ತಿಳಿಸಿದ್ದಾರೆ ಎಂರದೆ ಸಾಕ್ಷಿಯು ಅವರು ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದು ತಿಳಿಸಿದ್ದಾರೆ . ಸರ್ವೆ ನಂ. 29/4 ರಲ್ಲಿನ 1 ಎಕರೆ 33 ಗುಂಟೆ ಹಾಗೂ ಸರ್ವೆ ನಂ . 29/3 ರ 5 ಗುಂಟೆ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1959 ನೇ ಸಾಲಿನಲ್ಲಿಯೇ ನನ್ನ ತಾತ ಸರ್ವೆ ನಂ. 29 ರಲ್ಲಿ 1 ಎಕರೆ 38 1/2 ಗುಂಟೆ ಸ್ವತ್ತನ್ನು ಮಾರಾಟ ಮಾಡಿರುವ ಕಾರಣ ದಾವಾ "ಬಿ" ಷೆಡ್ಯೂಲ್ ಸ್ವತ್ತಿನ ಮೇಲೆ ನಮಗೆ ಹಕ್ಕು ಅಧಿಕಾರವಿಲ್ಲ ಎಂದರೆ ಸರಿಯಲ್ಲ. 1959 ರಿಂದಲೂ ಸದರಿ ಸ್ವತ್ತನ್ನು ಖರೀದಿಸಿರುವ ಖರೀದಿದಾರರುಗಳ ಹೆಸರಿಗೆ ದಾಖಲೆಗಳು ಬರುತ್ತಿವೆ ಎಂದರೆ ಸರಿಯಲ್ಲ.

1959 ರ ಕ್ರಯ ಪತ್ರದಲ್ಲಿ ನನ್ನ ತಾತ 1 ಎಕರೆ 38 1/2 ಗುಂಟೆ ಸ್ವತ್ತಿನ ಪೂರ್ವಕ್ಕೆ ನಮ್ಮ ಬಾಬ್ತು ಉಳಿಕೆ ಜಮೀನು, ಪಶ್ಚಿಮಕ್ಕೆ ಃ ನಂಜಪ್ಪ ರವರ ಜಮೀನು ಉತ್ತರಕ್ಕೆಃ ಮಲ್ಲದಾಸಿ ರವರ ಜಮೀನು ದಕ್ಷಿಣಕ್ಕೆ ಃ ಸರ್ಕಾರಿ ರಸ್ತೆ ಎಂಬುದಾಗಿ ಬರೆದಿದ್ದಾರೆ ಎಂದರೆ ಸರಿಯಲ್ಲ. ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 29 ರಲ್ಲಿ ನಿಮ್ಮ ತಾತನಿಗೆ ಸೇರಿದ ಯಾವುದೇ ಸ್ವತ್ತು ಇರುವುದಿಲ್ಲ ಎಂದರೆ ಸಾಕ್ಷಿಯು ಪರಿಶೀಲಿಸುತ್ತೇನೆ , ಸುರಿಗೇನಹಳ್ಳಿ ಗಗ್ರಾಮ ಮತ್ತು ಸುರಿಗೇನಹಳ್ಳಿ ಕಾವಲ್ ಎಂದರೆ ಬೇರೆ ಬೇರೆ ಎಂದು ತಿಳಿಸಿದ್ದಾರೆ .

ನಿಪಿ -8 ರಲ್ಲಿ ಬರೆದಿರುವ ಸ್ವತ್ತಿನ ಚಕ್ಕುಬಂದಿ ತಿಳಿದಿದೆ . ಸದರಿ ದಾಖಲೆಯಲ್ಲಿ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಮೊಹಮದ್ ಅಲಿ ರವರಸ್ವತ್ತು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯುನನ್ನ ತಾತ ಮೊಹಮದ್ ಅಲಿ ಯವರಿಗೆ ಸ್ವತ್ತನ್ನು ಗುತ್ತಿಗೆಗೆ ನೀಡಿದ್ದರು ಆ ಕಾರಣ ಆ ರೀತಿ ಬರೆದಿದ್ದಾರೆ ಎಂದು ತಿಳಿಸಿದ್ದಾರೆ . ಗುತ್ತಿಗೆ ನೀಡಿದ್ದಾರೆ ಎಂದರೆ ಮಾಲಿಕತ್ವ ಇರುವುದಿಲ್ಲ ಎಂದರೆ ಸಾಕ್ಷಿಯು ಪಶ್ಚಿಮ ದಿಕ್ಕಿನ ಚಕ್ಕುಬಂದಿಯನ್ನು ನಿಪಿ

-8 ರಲ್ಲಿ ತಪ್ಪಾಗಿ ನಮೂದಿಸಿದ್ದಾರೆ ಎಂದು ತಿಳಿಸಿದ್ದಾರೆ .1959 ರಲ್ಲಿಯೇ ನನ್ನ ತಾತ ಮೊಹಮದ್ ಅಲಿ ರವರಿಗೆ ಸ್ವತ್ತನ್ನು ಮಾರಾಟ ಮಾಡಿದ್ದ ಕಾರಣ ನಿಪಿ -8 ರ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಮೊಹಮದ್ ಅಲಿ ರವರ ಸ್ವತ್ತು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಸುರಿಗೇನಹಳ್ಳಿ ಕಾವಲಿನಲ್ಲಿ ನನ್ನ ತಾತ ಯಾವುದೇ ಸ್ವತ್ತನ್ನು ಮಾರಾಟ ಮಾಡಿಲ್ಲ ಎಂದು ತಿಳಿಸಿದ್ದಾರೆ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .